ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು - ೧೫

ಪಟ್ಟಿ-೨

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತ ನಾಲ್ಕನೇ ಅಧಿವೇಶನ

## ಮಂಗಳವಾರ, ದಿನಾಂಕ: ೧೦ನೇ ಡಿಸೆಂಬರ್, ೨೦೨೪

---

## ಸಮೂಹ – II

೧. ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

೨. ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

೩. ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

೪. ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

೫. ಪೌರಾಡಳಿತ ಹಾಗೂ ಹಜ್ ಸಚಿವರು

೬. ಸಹಕಾರ ಸಚಿವರು

೭. ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

---

## ಸಕ್ಕರೆ ಕಾರ್ಖಾನೆಗಳು ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಅವೈಜ್ಞಾನಿಕವಾಗಿ ಏರಿಸುತ್ತಿರುವ ಬಗ್ಗೆ

ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) –

೧೬ (೨೪೬) ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲಾ ವ್ಯಾಪ್ತಿಯ ಸಕ್ಕರೆ ಕಾರ್ಖಾನೆಗಳ ೨೦೨೪–೨೫ನೇ ಸಾಲಿಗೆ ಪ್ರತಿ ಟನ್ ಕಬ್ಬಿಗೆ ಪಾವತಿಸಬೇಕಿರುವ ನ್ಯಾಯಯುತ ಮತ್ತು ಲಾಭದಾಯಕ (ಎಫ್ ಆರ್ ಪಿ) ಬೆಲೆ ಎಷ್ಟು ; (ಸಕ್ಕರೆ ಕಾರ್ಖಾನೆವಾರು ಮಾಹಿತಿ ನೀಡುವುದು)

(ಆ) ಪ್ರಸಕ್ತ ಸಾಲಿಗೆ ಸಕ್ಕರೆ ಕಾರ್ಖಾನೆಗಳು ನಿಗದಿಪಡಿಸಿರುವ ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚ ಎಷ್ಟು ;

(ಇ) ಸಕ್ಕರೆ ಕಾರ್ಖಾನೆಗಳು ಯಾವುದೇ ಮಾನದಂಡಗಳಿಲ್ಲದೇ ಅವೈಜ್ಞಾನಿಕವಾಗಿ ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚ ಏರಿಸುತ್ತಿದ್ದು ರೈತರಿಗೆ ಹೊರೆಯಾಗಿದ್ದು, ನಿಯಂತ್ರಣಕ್ಕೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಿದೆ ; (ವಿವರ ನೀಡುವುದು)

(ಈ) ೨೦೨೩–೨೪ನೇ ಸಾಲಿನಲ್ಲಿ ಸಕ್ಕರೆ ಕಾರ್ಖಾನೆಗಳು ಕಬ್ಬು ಪೂರೈಸಿದ ರೈತರಿಗೆ ಮೊದಲ ಕಂತಿನಲ್ಲಿ ಕೇಂದ್ರ ಸರ್ಕಾರವು ನಿಗದಿಪಡಿಸಿದ್ದ ಎಫ್ ಆರ್ ಪಿ ಜೊತೆಗೆ ಪ್ರತಿ ಟನ್‌ಗೆ ರೂ.೧೦೦ ಹೆಚ್ಚುವರಿ ಹಾಗೂ ಎಥೆನಾಲ್ ಉತ್ಪಾದಿಸುವ ಸಕ್ಕರೆ ಕಾರ್ಖಾನೆಗಳು ಎಫ್ ಆರ್ ಪಿ ಜೊತೆಗೆ ಪ್ರತಿ ಟನ್‌ಗೆ ರೂ.೫೦ ಹೆಚ್ಚುವರಿ ಪಾವತಿಸಬೇಕು ಎಂದು ಸರ್ಕಾರ ಆದೇಶಿಸಿದ್ದು ಈವರೆವಿಗೂ ಹೆಚ್ಚುವರಿ ಬೆಲೆ ರೈತರಿಗೆ ಪಾವತಿ ಆಗದಿರುವ ಕುರಿತು ಸರ್ಕಾರದ ಕ್ರಮವೇನು ;

(ಉ) ೨೦೨೩–೨೪ನೇ ಸಾಲಿನಲ್ಲಿ ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿರುವ ಸಕ್ಕರೆ ಕಾರ್ಖಾನೆಗಳು ಎಷ್ಟು ಮೆಟ್ರಿಕ್ ಟನ್ ಕಬ್ಬನ್ನು ನುರಿಸಿವೆ ; ಶೇಕಡ ಎಷ್ಟು ಸಕ್ಕರೆ ಇಳುವರಿ ಬಂದಿದೆ ಹಾಗೂ ಉತ್ಪಾದಿಸಲಾದ ಸಕ್ಕರೆ ಪ್ರಮಾಣ, ಮಾರಾಟ ಪ್ರಮಾಣ ಹಾಗೂ ಬಂದ ಮೊತ್ತ ಎಷ್ಟು ; (ಸಕ್ಕರೆ ಕಾರ್ಖಾನೆವಾರು ಮಾಹಿತಿ ನೀಡುವುದು)

(ಊ) ಮಂಡ್ಯ ಜಿಲ್ಲೆಯ ಯಾವುದಾದರೂ ಸಕ್ಕರೆ ಕಾರ್ಖಾನೆಗಳು ಎಥೆನಾಲ್ ಘಟಕ ಸ್ಥಾಪಿಸುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿವೆಯೇ ? (ವಿವರ ನೀಡುವುದು)

## ವಿದ್ಯುತ್ ಚಾಲಿತ (ಇವಿ) ವಾಹನಗಳ ಸ್ಫೋಟಕ ಪ್ರಕರಣಗಳು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೭ (೨೨೫) ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಉತ್ಪಾದನೆಯಾದ ವಿದ್ಯುತ್ ಚಾಲಿತ (ಇವಿ) ವಾಹನಗಳು ಆಕಸ್ಮಿಕ ಸ್ಫೋಟ, ಮತ್ತು ಬ್ಯಾಟರಿ ಸ್ಫೋಟದಂತಹ ಬೆಂಕಿ ಅಪಘಾತಕ್ಕೆ ಈಡಾಗುತ್ತಿರುವ ಪ್ರಕರಣಗಳು ಪದೇ ಪದೇ ವರದಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈವರೆಗೆ ಯಾವ ಯಾವ ಕಂಪನಿಗಳ ಎಷ್ಟು ವಾಹನಗಳು ಬೆಂಕಿ ಅಪಘಾತಕ್ಕೆ ಈಡಾಗಿವೆ ;

(ಇ) ಪರಿಸರ ಕಾಳಜಿಯಿಂದಾಗಿ ಹಾಗೂ ಇಂಧನ ವೆಚ್ಚದಲ್ಲಿನ ಉಳಿತಾಯದ ಕಾರಣ ಹೆಚ್ಚು ಹೆಚ್ಚು ಜನರು ಎಲೆಕ್ಟ್ರಿಕ್ ವಾಹನಗಳನ್ನು ಖರೀದಿಸುತ್ತಿದ್ದು, ಸರ್ಕಾರ ಇವಿ ವಾಹನಗಳ ಉದ್ದಿಮೆಗಳ ಮೇಲೆ ನಿಯಂತ್ರಣ ಹೊಂದಿದೆಯೇ ;

(ಈ) ಹೊಂದಿದ್ದಲ್ಲಿ, ಇವಿ ವಾಹನಗಳ ಸುರಕ್ಷತೆ ದೃಷ್ಟಿಯಿಂದ ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು ?

## ಪೌರಾಡಳಿತ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೮ (೩೫೭) ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಪೌರಾಡಳಿತ ಇಲಾಖೆಯಲ್ಲಿ ವಿವಿಧ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ಹುದ್ದೆವಾರು ಪೂರ್ಣ ವಿವರ ಒದಗಿಸುವುದು)

(ಆ) ದಾವಣಗೆರೆ ಜಿಲ್ಲೆ ವ್ಯಾಪ್ತಿಯಲ್ಲಿ ಸದರಿ ಇಲಾಖೆಯಲ್ಲಿ ಇರುವ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು ; (ಪೂರ್ಣ ಮಾಹಿತಿ ಒದಗಿಸುವುದು)

(ಇ) ಖಾಲಿ ಹುದ್ದೆ ಕೊರತೆಯಿಂದ ಆಡಳಿತಾತ್ಮಕವಾಗಿ ಮತ್ತು ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಇರುವ ತೊಂದರೆಗಳೇನು ;

(ಈ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿ ಆಡಳಿತಾತ್ಮಕವಾಗಿ ಮತ್ತು ಸಾರ್ವಜನಿಕ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಸ್ಮಾರ್ಟ್ ಸಿಟಿ ಅನುಷ್ಠಾನದ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೧೯ (೨೬೪) ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಐದು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಸ್ಮಾರ್ಟ್ ಸಿಟಿ ಯೋಜನೆಯು ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಕೈಗೊಂಡಿರುವ ಸ್ಮಾರ್ಟ್ ಸಿಟಿ ಯೋಜನೆಗಳಲ್ಲಿ ಬಹುತೇಕ ಯೋಜನೆಗಳು ಇನ್ನೂ ಟೆಂಡರ್ ಹಂತದಲ್ಲಿದ್ದು, ಸದರಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಯಾವಾಗ ಪೂರ್ಣಗೊಳಿಸಲಾಗುವುದು ;

(ಇ) ಈಗಾಗಲೇ ಪೂರ್ಣಗೊಳಿಸಿರುವ ಸ್ಮಾರ್ಟ್ ಸಿಟಿ ಯೋಜನೆಗಳು ಕಳಪೆ ಮಟ್ಟದಿಂದ ಕೂಡಿದ್ದು ಮಳೆಗಾಲದಲ್ಲಿ ರಸ್ತೆಗಳು, ಚರಂಡಿಗಳು ಇತ್ಯಾದಿಗಳಲ್ಲಿ ರಸ್ತೆ ಡಾಂಬರೀಕರಣ ಕಿತ್ತು ಹೋಗಿದ್ದು, ಚರಂಡಿ ನೀರು ರಸ್ತೆ ಮೇಲೆ ಹರಿಯುತ್ತಿದ್ದು, ಇದರಿಂದಾಗಿ ಜನ ಸಾಮಾನ್ಯರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ರೀತಿ ಕಳಪೆ ಕಾಮಗಾರಿಗಳನ್ನು ಕೈಗೊಂಡು ಯೋಜನೆಯು ಪೂರ್ಣಗೊಂಡಿರುವ ಬಗ್ಗೆ ಸಂಬಂಧಿಸಿದ ಕಛೇರಿಗಳಿಂದ Work Done Certificate ಪಡೆಯುತ್ತಿರುವ ಗುತ್ತಿಗೆದಾರರ ಮತ್ತು ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು ?

## ಬೆಂಗಳೂರು ಗಾಲ್ಫ್ ಕ್ಲಬ್‌ನಲ್ಲಿ ಸದಸ್ಯತ್ವ ಪಡೆಯುವ ಬಗ್ಗೆ

**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೦ (೧೮೯) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಗಾಲ್ಫ್ ಕ್ಲಬ್‌ನಲ್ಲಿ ಹೊಸದಾಗಿ ಸದಸ್ಯತ್ವ ಪಡೆಯಲು ಇರುವ ಮಾನದಂಡಗಳೇನು ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ಸದರಿ ಕ್ಲಬ್‌ನಲ್ಲಿ ಕಳೆದ ೩ ವರ್ಷಗಳಿಂದ ಇಲ್ಲಿಯವರೆಗೂ ಮರು ನೋಂದಣಿ ಹಾಗೂ ಹೊಸದಾಗಿ ನೋಂದಣಿಯಾಗಿರುವವರ ಸಂಖ್ಯೆ ಎಷ್ಟು ; (ವರ್ಷವಾರು ಸಂಪೂರ್ಣವಾದ ಮಾಹಿತಿ ನೀಡುವುದು)

(ಇ) ಈ ಕ್ಲಬ್ ಸದಸ್ಯತ್ವ ನೀಡುವಲ್ಲಿ ಪಾರದರ್ಶಕತೆ ಪಾಲಿಸದೇ ಇರುವುದು ಮತ್ತು ನಿಯಮ ಬಾಹಿರವಾಗಿ ಅಬಕಾರಿ ಪರವಾನಗಿ ಪಡೆದಿರುವುದು ಹಾಗೂ ಬಿ.ಬಿ.ಎಂ.ಪಿ.ಗೆ ತೆರಿಗೆ ಪಾಲಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರವು ಈ ಕ್ಲಬ್ ಮೇಲೆ ಯಾವ ಕ್ರಮ ಕೈಗೊಂಡಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಬೆಂಗಳೂರು ಗಾಲ್ಫ್ ಕ್ಲಬ್‌ಗೆ ನೀಡಿರುವ ಜಾಗದಿಂದ ಸರ್ಕಾರಕ್ಕೆ ಯಾವ ಯಾವ ಮೂಲಗಳಿಂದ ಎಷ್ಟು ಆದಾಯ ಬರುತ್ತಿದೆ ; ಈ ಆದಾಯವನ್ನು ಯಾವ ಮಾನದಂಡಗಳ ಮೇಲೆ ನಿಗದಿಪಡಿಸಲಾಗಿದೆ ? (ಸಂಪೂರ್ಣವಾದ ಮಾಹಿತಿ ನೀಡುವುದು)

## ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಗಣಿಗಾರಿಕೆ ನಿಯಮಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೧ (೨೫೨) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಅನುಸರಿಸುತ್ತಿರುವ ಗ್ರಾನೈಟ್, ಮಾರ್ಬಲ್, ಕಪ್ಪುಕಲ್ಲು, ಮರಳು, ಕೆಂಪು ಕಲ್ಲು ಮತ್ತು ಇತರ ಎಲ್ಲಾ ಗಣಿಗಾರಿಕೆ ಉತ್ಪನ್ನಗಳನ್ನು ಹಾಗೂ ಮಣ್ಣು ತೆಗೆಯುವ, ಸಾಗಾಟ ಹಾಗೂ ಮಾರಾಟದ ಬಗ್ಗೆ ಮತ್ತು ರಾಜಧನ ಕುರಿತು ಅನುಸರಿಸುತ್ತಿರುವ ನಿಯಮಗಳೇನು ;

(ಆ) ಯಾವುದೇ ರಸ್ತೆ, ಕಾಲುವೆ, ವಿಮಾನ ನಿಲ್ದಾಣ, ಹಾಗೂ ಇನ್ನಿತರ ಸಾರ್ವಜನಿಕ ಕಾಮಗಾರಿಗಳನ್ನು ನಡೆಸುವಾಗ ಲಭ್ಯವಾಗುವ ಕಲ್ಲು ಹಾಗೂ ಮಣ್ಣು ಸಹಿತ ಇನ್ನಿತರ ಯಾವುದೇ ಖನಿಜ ಇತ್ಯಾದಿಗಳನ್ನು ತೆಗೆಯಲು, ಕಾಮಗಾರಿಗೆ ಬಳಸಲು, ಅಥವಾ ಸಾಗಿಸಿ ಮಾರಾಟ ಮಾಡಲು ಅವಕಾಶವಿದೆಯೇ ; ಹೀಗೆ ಲಭ್ಯವಾಗುವ ಕಲ್ಲು ಮಣ್ಣಿನ ಮೌಲ್ಯವನ್ನು ಗುತ್ತಿಗೆ ಪಾವತಿ ಬಿಲ್ಲಿನಲ್ಲಿ ಕಡಿತಗೊಳಿಸಲಾಗುತ್ತಿದೆಯೇ ;

(ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಸ್ತೆ ಮತ್ತು ಹೆದ್ದಾರಿ ನಿರ್ಮಾಣ ಸಂದರ್ಭದಲ್ಲಿ ಲಭ್ಯವಾಗುವ ಕೆಂಪು ಕಲ್ಲು, ಮಣ್ಣನ್ನು ಮಾರಾಟ ಮಾಡಲು ನಿರ್ಬಂಧಿಸಲಾಗಿದೆಯೇ ; ರಸ್ತೆ ಕಾಮಗಾರಿಯ ಸಂದರ್ಭದಲ್ಲಿ

ತೆರವುಗೊಳಿಸಿದ ಮಣ್ಣನ್ನು ಅದೇ ಕಾಮಗಾರಿಗೆ ಬಳಸಲಾಗುತ್ತಿರುವ ಅಥವಾ ಮಾರಾಟ ಮಾಡುವ ಬಗ್ಗೆ ನಿಗಾ ವಹಿಸಲಾಗಿದೆಯೇ ;

(ಈ) ಕಾಮಗಾರಿಗಳಿಗೆ ಗುಡ್ಡ ಅಗೆದು ಮಣ್ಣು ಸಾಗಿಸುವಾಗ ಎತ್ತರ ಪ್ರದೇಶದಲ್ಲಿ ೯೦ ಡಿಗ್ರಿಯ ಕಡಿದಾದ ಪ್ರಪಾತವನ್ನು ನಿರ್ಮಿಸಿ ಕ್ರಮೇಣ ಶಿರೂರು ದುರಂತ ಪ್ರಕರಣದಂತೆ ಮಳೆಗಾಲದಲ್ಲಿ ಭೂಕುಸಿತ ಸಂಭವಿಸುವುದನ್ನು ತಡೆಯುವ ಬಗ್ಗೆ ಇಲಾಖೆಯಿಂದ ಏನು ಕ್ರಮ ವಹಿಸಲಾಗುತ್ತಿದೆ ?

## ಕೈಗಾರಿಕೆಗಳ ತ್ಯಾಜ್ಯದಿಂದ ಪರಿಸರ ಮಾಲಿನ್ಯ ಆಗುತ್ತಿರುವ ಕುರಿತು

**ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ) –**

೨೨ (೧೯೭) ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೈಗಾರಿಕೆಗಳು ವಿವಿಧ ರೀತಿಯ ತ್ಯಾಜ್ಯಗಳನ್ನು ವಿಲೇವಾರಿ ಮಾಡಲು ಅನುಸರಿಸಬೇಕಾದ ಮಾನದಂಡಗಳೇನು ;

(ಆ) ಶಿವಮೊಗ್ಗ ಜಿಲ್ಲೆಯಲ್ಲಿನ ಹಲವಾರು ಕೈಗಾರಿಕೆಗಳು ಸರ್ಕಾರದ ಮಾನದಂಡಗಳನ್ನು ಪಾಲಿಸದೆ ಅಪಾಯಕಾರಿ ತ್ಯಾಜ್ಯಗಳನ್ನು ನೇರವಾಗಿ ಕೆರೆ/ನದಿಗಳಿಗೆ ಬಿಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಯಾವ ಯಾವ ಕೈಗಾರಿಕೆಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ ; (ವಿವರ ನೀಡುವುದು)

(ಈ) ಕೈಗಾರಿಕೆಗಳು ತ್ಯಾಜ್ಯ ವಿಲೇವಾರಿಗೆ ಅಗತ್ಯ ವ್ಯವಸ್ಥೆಯುನ್ನು ಕೈಗೊಂಡಿರುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಅಪಾಯಕಾರಿ ತ್ಯಾಜ್ಯಗಳನ್ನು ನೇರವಾಗಿ ಕೆರೆ/ನದಿ ಮೂಲಗಳಿಗೆ ಬಿಡುವುದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕಠಿಣ ಕ್ರಮಗಳೇನು ?

## ಬಳ್ಳಾರಿ ಜಿಲ್ಲೆಯಲ್ಲಿ ಡಿ.ಎಂ.ಎಫ್ ನ ಸಭೆಗಳು ನಡೆಯದಿರುವ ಬಗ್ಗೆ

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೨೩ (೧೭೮) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆಯಲ್ಲಿ ಕಳೆದ ೨ ವರ್ಷಗಳಲ್ಲಿ ಜಿಲ್ಲಾ ಖನಿಜ ನಿಧಿಯಿಂದ (ಡಿ.ಎಂ.ಎಫ್) ಸಂಗ್ರಹಗೊಂಡಿರುವ ಹಣ ಎಷ್ಟು ; ಈ ಹಣವನ್ನು ಯಾವ ಯಾವ ಅಭಿವೃದ್ಧಿ ಕಾಮಗಾರಿಗಳಿಗೆ ಬಳಸಿಕೊಳ್ಳಲಾಗಿದೆ ; (ಕಾಮಗಾರಿಗಳ ಹಂತವಾರು ವಿವರಗಳೊಂದಿಗೆ ಮಾಹಿತಿ ಒದಗಿಸುವುದು)

(ಆ) ಪ್ರಸ್ತುತ ಜಿಲ್ಲಾ ಖನಿಜ ನಿಧಿಯಲ್ಲಿ ಉಳಿದಿರುವ ಹಣ ಎಷ್ಟು ; (ಮಾಹಿತಿ ಒದಗಿಸುವುದು)

(ಇ) ಕಳೆದ ೨ ವರ್ಷಗಳಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ (ಡಿ.ಎಂ.ಎಫ್)ದ ಸಭೆ ಯಾವಾಗ ನಡೆಯಿತು ; ಇಲ್ಲದಿದ್ದಲ್ಲಿ ಕಾರಣವೇನು ; ಯಾವಾಗ ಸಭೆಯನ್ನು ಕರೆಯಲಾಗುವುದು ದಿನಾಂಕ ನಿಗಧಿ ಮಾಡಲಾಗಿದೆಯೇ ; (ಮಾಹಿತಿ ಒದಗಿಸುವುದು)

(ಈ) ಜಿಲ್ಲಾ ಖನಿಜ ಪ್ರತಿಷ್ಠಾನದ ನಿಧಿಯನ್ನು ವೆಚ್ಚ ಮಾಡಲು ಇರುವ ಮಾರ್ಗಸೂಚಿ/ಮಾನದಂಡಗಳೇನು ? (ಸರ್ಕಾರಿ ಆದೇಶದ ಪ್ರತಿಗಳೊಂದಿಗೆ ಸಂಪೂರ್ಣ ವಿವರ ಒದಗಿಸುವುದು)

## ಬೆಳ್ತಂಗಡಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಕಟ್ಟಡ ಪರವಾನಗಿ ದೊರೆಯದಿರುವ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನಸಭೆಯಿಂದ ಚುನಾಯಿತರಾದವರು) –**

೨೪ (೧೮೬) ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಗಂಡಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ನಗರ ಪ್ರಾಧಿಕಾರದ ಮಹಾ ಯೋಜನೆಯನ್ನು ಜಾರಿಗೆ ತರುವ ಪ್ರಸ್ತಾವನೆಯಿಂದಾಗಿ ೨೦೧೭ರ ಪೂರ್ವದ ಭೂ ಪರಿವರ್ತಿತ ಹಾಗೂ ನಮೂನೆ-೩ರಂತೆ ಗುರುತಿಸಿರುವ ನಿವೇಶನಗಳನ್ನು ಹೊಂದಿರುವ ಖಾತೆದಾರರಿಗೆ ಹೊಸ ಮನೆ ನಿರ್ಮಾಣಕ್ಕಾಗಿ ಕಟ್ಟಡ ಪರವಾನಗಿ ದೊರೆಯದೆ ಮತ್ತು ಈಗಾಗಲೇ ವಾಸವಿರುವ ಮನೆಗಳ ನವೀಕರಣ ಅಥವಾ ವಿಸ್ತರಣೆಗೆ ಕೂಡ ಪರವಾನಗಿ ದೊರೆಯದೆ ಸಾರ್ವಜನಿಕರಿಗೆ ದೀರ್ಘಕಾಲದಿಂದ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಬೆಳ್ತಂಗಡಿ ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಸಂಬಂಧಿಸಿದಂತೆ ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ೨೦೧೭ರ ಪೂರ್ವದಲ್ಲಿ ಕೃಷಿಯೇತರ ಉದ್ದೇಶಕ್ಕಾಗಿ ಭೂ-ಪರಿವರ್ತಿತ ಆಸ್ತಿಗಳನ್ನು ಹೊಂದಿರುವವರಿಗೆ ಮಹಾ ಯೋಜನೆಯ ನಿಯಮಗಳನ್ನು ಅನ್ವಯಿಸದೆ ಈ ಹಿಂದಿನಂತೆ ನಿವೇಶನಗಳ ವಿನ್ಯಾಸ ನಕ್ಷೆಯನ್ನು ಅನುಮೋದಿಸಿ, ಅಧಿಕೃತ ನಿವೇಶನಗಳೆಂದು ಪರಿಗಣಿಸಿ ಕಟ್ಟಡ ನಿರ್ಮಾಣಕ್ಕೆ ಅಗತ್ಯವಿರುವ ಕಟ್ಟಡ ಪರವಾನಗಿಯನ್ನು ನೀಡಲು ಸರ್ಕಾರ ಇದುವರೆಗೂ ಯಾವುದೇ ಕ್ರಮವಹಿಸದೇ ಇರಲು ಕಾರಣಗಳೇನು ;

(ಇ) ಅಂತಹ ಖಾತೆದಾರರಿಗೆ ಯಾವ ಕಾಲಮಿತಿಯೊಳಗೆ ಸದರಿ ಸಮಸ್ಯೆಯನ್ನು ಪರಿಹರಿಸಿ, ದೀರ್ಘಕಾಲದಿಂದ ಸಮಸ್ಯೆ ಪರಿಹಾರಕ್ಕಾಗಿ ಕಾಯುತ್ತಿರುವ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗುವುದು ?

## ಉತ್ತರ ಕರ್ನಾಟಕ ಭಾಗದ ತೋಟಗಾರಿಕೆ ಅವಲಂಬಿತ ರೈತರಿಗಾಗಿ ಸಫಲ ಮಾದರಿ ಮಾರುಕಟ್ಟೆ ಸ್ಥಾಪನೆ ಮಾಡುವ ಬಗ್ಗೆ

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೫ (೨೪೩) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಉತ್ತರ ಕರ್ನಾಟಕ ಜಿಲ್ಲೆಗಳಾದ ಬಾಗಲಕೋಟೆ, ವಿಜಯಪುರ, ಬೆಳಗಾವಿ ಈ ಪ್ರದೇಶಗಳಲ್ಲಿ ರಫ್ತು ಗುಣಮಟ್ಟದ ಬೆಳೆಗಳನ್ನು ವಿಫುಲವಾಗಿ ಬೆಳೆಯಲಾಗುತ್ತಿರುವ ಕಾರಣದಿಂದಾಗಿ ಅಲ್ಲಿನ ರೈತರಿಗೆ ಸಮೀಪದಿಂದ ತಾಂತ್ರಿಕ ಸಹಾಯ ಮಾಹಿತಿ ಸಿಗುವಂತಾಗಲಿ ಎನ್ನುವ ಉದ್ದೇಶದಿಂದ ಬಾಗಲಕೋಟೆಯಲ್ಲಿ "ತೋಟಗಾರಿಕೆ ವಿಶ್ವವಿದ್ಯಾಲಯ" ಸ್ಥಾಪನೆ ಮಾಡಲಾಗಿರುವುದು ನಿಜವಲ್ಲವೆ ;

(ಆ) ಅದೇ ರೀತಿ ಕೇಂದ್ರ ಸ್ಥಾನ ಬೆಂಗಳೂರಲ್ಲಿ ದಶಕಗಳ ಹಿಂದೆಯೇ ಸಫಲ ಎಂಬ ಮಾರುಕಟ್ಟೆ ಸ್ಥಾಪನೆ ಮಾಡಿ, ತೋಟಗಾರಿಕೆ ಅವಲಂಬಿತ ಆ ಭಾಗದ ರೈತರಿಗೆ ತಾಂತ್ರಿಕತೆ ಜೊತೆಗೆ ರೈತರ ಫಸಲುಗಳಿಗೆ ಉತ್ತಮ ದರ ಕೂಡ ಸಿಗುವಂತೆ ಮಾಡಿದ್ದು, ಅದರಂತೆ ಉತ್ತರ ಕರ್ನಾಟಕ ಭಾಗದ ತೋಟಗಾರಿಕೆ ಅವಲಂಬಿತ ರೈತರು ಸಫಲ ಮಾದರಿ ಮಾರುಕಟ್ಟೆ ಬಾಗಲಕೋಟೆಯಲ್ಲಿ ಸ್ಥಾಪನೆ ಮಾಡಲು ಬೇಡಿಕೆ ಇಟ್ಟಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಸರ್ಕಾರವು ಸಫಲ ಮಾದರಿ ಮಾರುಕಟ್ಟೆಯನ್ನು ಬಾಗಲಕೋಟೆಯಲ್ಲಿ ಎಂದು, ಯಾವಾಗ ಸ್ಥಾಪನೆ ಮಾಡಲಾಗುವುದು ? (ಮಾಹಿತಿ ನೀಡುವುದು)

## ಪುರಸಭೆ, ನಗರಸಭೆ, ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಇ–ಖಾತೆಯ ಸಮಸ್ಯೆಯ ಕುರಿತು

**ಶ್ರೀ ರಾಜೇಂದ್ರ ರಾಜಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೬ (೨೩೮) ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಸ್ಥಳೀಯ ಸಂಸ್ಥೆಗಳಾದ ಪಟ್ಟಣ ಪಂಚಾಯಿತಿ, ಪುರಸಭೆ ಮತ್ತು ನಗರ ಸಭೆ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆಯಲ್ಲಿ ಇ–ಖಾತೆ ಇಲ್ಲದಿರುವ ನಿವೇಶನ/ಕಟ್ಟಡಗಳ ಸಂಖ್ಯೆ ಎಷ್ಟು ; (ಸ್ಥಳೀಯ ಸಂಸ್ಥೆವಾರು/ ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)

(ಆ) ಇ–ಖಾತೆ ಇಲ್ಲದಿರುವುದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಪಟ್ಟಣ ಪಂಚಾಯಿತಿ, ಪುರಸಭೆ ಮತ್ತು ನಗರಸಭೆ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆಯಲ್ಲಿ ಇ–ಖಾತೆ ಇಲ್ಲದಿರುವ ನಿವೇಶನ/ಕಟ್ಟಡಗಳಿಗೆ ಇ–ಖಾತಾ ನೀಡಲು ಸರ್ಕಾರ ಕ್ರಮಕೈಗೊಳ್ಳುವುದೇ ?

## ಜಿಂದಾಲ್ ಕಂಪನಿಗೆ ನೀಡಿರುವ ಜಮೀನಿನ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) –**

೨೭ (೧೭೦) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಜಿಂದಾಲ್ ಉಕ್ಕು ಕಂಪನಿಗೆ ಈವರೆಗೆ ನೀಡಿರುವ ಮತ್ತು ಹೊಸದಾಗಿ ನೀಡಲು ಉದ್ದೇಶಿಸಿರುವ ಜಮೀನು ಎಷ್ಟು ; ಪ್ರತಿ ಎಕರೆಗೆ ನಿಗದಿಪಡಿಸಿರುವ ಮೊತ್ತ ಎಷ್ಟು ; ಈ ಜಮೀನಿಗೆ ಹಾಲಿ ಇರುವ ಮಾರುಕಟ್ಟೆ ದರ ಎಷ್ಟು ;

(ಆ) ಮಾನ್ಯ ರಾಜ್ಯ ಉಚ್ಛ ನ್ಯಾಯಾಲಯ ಜಿಂದಾಲ್ ಉಕ್ಕು ಕಂಪನಿಗೆ ಜಮೀನು ನೀಡುವ ಕುರಿತು ನೀಡಿರುವ ಸೂಚನೆ ಏನು ;

(ಇ) ಜಿಂದಾಲ್ ಕಂಪನಿಗೆ ನೀಡಲು ಉದ್ದೇಶಿಸಿರುವ ಜಮೀನಿನ ಪೈಕಿ ಸರ್ಕಾರಿ ಮತ್ತು ಖಾಸಗಿ ಜಮೀನು ಎಷ್ಟು ; ಖಾಸಗಿ ಜಮೀನು ಮಾಲೀಕರು ತಮ್ಮ ಜಮೀನನ್ನು ನೀಡಲು ಒಪ್ಪಿಗೆ ನೀಡಿದ್ದಾರೆಯೇ ; ಈವರೆಗೆ ಎಷ್ಟು ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಈ) ಜಿಂದಾಲ್ ಕಂಪನಿಗೆ ಜಮೀನು ಹಂಚಿಕೆ ಕುರಿತು ಜಮೀನು ಮಾಲೀಕರು ಹಾಗೂ ಅಗತ್ಯಕ್ಕಿಂತ ಹೆಚ್ಚು ಜಮೀನು ಹಂಚಿಕೆ ವಿರೋಧಿಸಿ ವಿವಿಧ

ಸಂಘಟನೆಗಳಿಂದ ವಿರೋಧ ವ್ಯಕ್ತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಜಮೀನು ಮಾಲೀಕರ ಮತ್ತು ಸಂಘಟನೆಗಳ ಬೇಡಿಕೆ ಏನು ; ಇವರ ಬೇಡಿಕೆ ಕುರಿತು ಸರ್ಕಾರದ ನಿಲುವೇನು ;

(ಉ) ಜಿಂದಾಲ್ ಕಂಪನಿಯು ರೈತರಿಗೆ ನೀಡಿರುವ ಸೌಲಭ್ಯಗಳೇನು ; ರಾಜ್ಯಾದ್ಯಂತ ಜಿಂದಾಲ್ ಕಂಪನಿಯಿಂದ ಎ,ಬಿ,ಸಿ ಮತ್ತು ಗ್ರೂಪ್ “ಡಿ” ವರ್ಗದಡಿ ನೀಡಿರುವ ನೇರ ಉದ್ಯೋಗ ಎಷ್ಟು ? (ಜಿಲ್ಲಾವಾರು ವಿವರವನ್ನು ಹುದ್ದೆವಾರು ನೀಡುವುದು)

## ಅಕ್ರಮ ಮರಳು ದಂಧೆ

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) –**

೨೮ (೨೫೮) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿ, ಬಸವಕಲ್ಯಾಣ, ಬೀದರ್ ಇನ್ನಿತರ ಸ್ಥಳಗಳಲ್ಲಿ ಅಧಿಕಾರಿಗಳು ಎಸ್.ಪಿ.ಸರ್ಕಲ್ ಇನ್ಸ್ಪೆಕ್ಟರ್, ಡಿವೈಎಸ್‌ಪಿ, ಗಣಿ ಇಲಾಖೆ, ಸಾರಿಗೆ ಇಲಾಖೆ ಅಧಿಕಾರಿಗಳಿದ್ದರೂ ಪ್ರತಿನಿತ್ಯ ಹಗಲು ರಾತ್ರಿ ಸುಮಾರು ೧೫ ರಿಂದ ೨೦ ಲಾರಿಗಳಿಗೆ ಒಂದೇ ನಂಬರ್ ಪ್ಲೇಟ್ ಮುಖಾಂತರ ಕೆಲವರು ಅಕ್ರಮ ಮರಳು ದಂಧೆ ನಡೆಸುತ್ತಿದ್ದರೂ ಅವರನ್ನು ಹೊರತುಪಡಿಸಿ ಸಣ್ಣ ಸಣ್ಣ ಮನೆ ಕಟ್ಟುವವರಿಗೆ, ಸಣ್ಣ ಪುಟ್ಟ ರಿಪೇರಿ ಮಾಡಲು ಎತ್ತಿನ ಗಾಡಿ ಮೂಲಕ ಸ್ವಂತ ಗೃಹ ಉಪಯೋಗಕ್ಕೆ ಸಾಗಿಸುವ ಮರಳನ್ನು ಜಪ್ತಿ ಮಾಡಿ ಸೀಜ್ ಮಾಡಿ ಅವರುಗಳ ಮೇಲೆ ಅಮಾನವೀಯತೆಯಿಂದ ವರ್ತಿಸುತ್ತಿರುವವರ ಮೇಲೆ ಕಡಿವಾಣ ಹಾಕಿ, ಅಕ್ರಮವಾಗಿ ಮರಳು ದಂಧೆ ಮಾಡುತ್ತಿರುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುವುದೆ ;

(ಆ) ಇಂತಹ ಅಕ್ರಮ ಮರಳು ದಂಧೆಯಲ್ಲಿ ಭಾಗಿಯಾಗಿರುವ ಎಷ್ಟು ಲಾರಿಗಳನ್ನು/ ವಾಹನಗಳನ್ನು ಸೀಜ್ ಮಾಡಿ ಎಷ್ಟು ದಂಡ ವಸೂಲಿ ಮಾಡಲಾಗಿದೆ ; (ವಿವರ ಒದಗಿಸುವುದು)

(ಇ) ಮನೆ ಕಟ್ಟುವವರಿಗೆ, ಸಣ್ಣಪುಟ್ಟ ದುರಸ್ತಿ ಕಾರ್ಯಕ್ಕೆ ಮರಳು ಲಭಿಸುವಿಕೆಯನ್ನು ಸರಳಗೊಳಿಸಿ ಜನಸಾಮಾನ್ಯರ ಸಮಸ್ಯೆಗೆ ಸ್ಪಂದಿಸಲು ಸರ್ಕಾರದ ಮುಂದಿರುವ ಕಾರ್ಯಕ್ರಮಗಳೇನು ?

## ಆಧಾರ ರಹಿತ ದೂರಿನ ಕಾರಣ ಸಾರ್ವಜನಿಕರಿಗೆ ತೊಂದರೆ ನೀಡುತ್ತಿರುವ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) –**

೨೯ (೧೫೫) ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಜಿಲ್ಲೆ, ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯ ಸೋಮಶೆಟ್ಟಿಹಳ್ಳಿ ಗ್ರಾಮದ ಗ್ರಾಮಠಾಣಾದಲ್ಲಿ ಇರುವ ಸರ್ಕಾರಿ/ಅಥವಾ ಸಂಘ ಸಂಸ್ಥೆಗೆ ಸೇರಿದ ಸ್ವತ್ತುಗಳ ಸಂಖ್ಯೆ ಎಷ್ಟು ; (ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ ೨೦೧೧ಕ್ಕೆ ಒಳಪಡುವ ಸ್ವತ್ತುಗಳು) ಒತ್ತುವರಿಯಾಗಿರುವ ಸ್ವತ್ತುಗಳ ಸಂಖ್ಯೆ ಎಷ್ಟು ; ಮತ್ತು ಒತ್ತುವರಿದಾರರು ಯಾರು ;

(ಆ) ಅಪರಾಧ ಹಿನ್ನೆಲೆಯಲ್ಲಿ ಉದ್ದೇಶ ಪೂರ್ವಕವಾಗಿ ದೂರುದಾರ ವ್ಯಕ್ತಿಯೊಬ್ಬರು ನೀಡಿದ ಆಧಾರ ರಹಿತ ದೂರಿನ ಮೇಲೆ ಗ್ರಾಮದ ೧ ರಿಂದ ೧೦೦ರ ವರೆಗಿನ ಎಷ್ಟು ಆಸ್ತಿ ಮಾಲೀಕರಿಗೆ ಪುರಸಭೆಯಿಂದ ನೋಟೀಸ್ ನೀಡಲಾಗಿದೆ ; ಅದರಲ್ಲಿ ಎಷ್ಟು ಮಾಲೀಕರು ಆಸ್ತಿ ದಾಖಲೆಗಳನ್ನು ಹಾಜರು ಪಡಿಸಿದರು ; (ಮಾಡಿದವರ ಪೂರ್ಣ ವಿವರ ನೀಡುವುದು)

(ಇ) ದೂರುದಾರರ ದೂರನ್ನು ಆಧಾರವಾಗಿಟ್ಟುಕೊಂಡು ರಿಜಿಸ್ಟರ್ ನಲ್ಲಿ ಎಷ್ಟು ಆಸ್ತಿಗಳ ಮುಂದೆ ತಕರಾರು ಎಂದು ದಾಖಲಿಸಲಾಗಿದೆ ; ಈ ರೀತಿಯಲ್ಲಿ ಆಧಾರ ರಹಿತ ದೂರಿಗೆ ತಕರಾರು ಎಂದು ದಾಖಲಿಸುವುದು ಸಂದೇಹದ ಕ್ರಮವೆ ;

(ಈ) ಇವರ ದೂರಿನ ಕಾರಣದಿಂದ ಗ್ರಾಮಠಾಣಾ ವ್ಯಾಪ್ತಿಯ ಆಸ್ತಿಗಳ ತೆರಿಗೆಯನ್ನು ಸಹ ಪುರಸಭೆಯ ಅಧಿಕಾರಿಗಳು ಸ್ವೀಕರಿಸದೇ, ಹಿಂಬರಹ ನೀಡಿ, ಕಂದಾಯ ನಿವೇಶನಗಳ ತೆರಿಗೆ ಸ್ವೀಕರಿಸುವ ಮೂಲಕ ಪುರಸಭೆಗೆ ನಷ್ಟವುಂಟು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ;

(ಉ) ಗ್ರಾಮಠಾಣಾ ವ್ಯಾಪ್ತಿಯಲ್ಲಿನ ಸ್ವತ್ತು ನಮೂನೆ–೯ ಮತ್ತು ಮ್ಯುಟೇಷನ್ ರಿಜಿಸ್ಟರ್ ನಲ್ಲಿ ದಾಖಲಾಗಿದ್ದು, ಗ್ರಾಮಠಾಣಾ ಸ್ಕೆಚ್ ಸಲ್ಲಿಸಿದ್ದರೂ ಸಹ ಇ–ಆಸ್ತಿ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ;

(ಊ) ಗ್ರಾಮಠಾಣಾ ವ್ಯಾಪ್ತಿಯಲ್ಲಿನ ಸ್ವತ್ತುಗಳ ಸಂಖ್ಯೆ ಎಷ್ಟು ಮತ್ತು ಅವುಗಳಿಂದ ೨೦೨೧ ರಿಂದ ಇಲ್ಲಿಯವರೆಗೆ ವಸೂಲಿ ಮಾಡಿದ ತೆರಿಗೆ ಎಷ್ಟು, ಬಾಕಿಯಿರುವ ತೆರಿಗೆ ಎಷ್ಟು; (ವರ್ಷವಾರು ವಿವರ ನೀಡುವುದು) ಬಾಕಿ ವಸೂಲಿಗೆ ಡಿಮ್ಯಾಂಡ್ ನೋಟೀಸ್ ನೀಡಲಾಗಿದೆಯೇ ; ನೀಡಲಾಗಿದ್ದರೆ ಎಷ್ಟು ಬಾರಿ ನೋಟೀಸ್ ನೀಡಲಾಗಿದೆ ;

(ಋ) ಸೋಮಶೆಟ್ಟಹಳ್ಳಿ ಗ್ರಾಮದ ಗ್ರಾಮಠಾಣಾ ವ್ಯಾಪ್ತಿಯ ನಮೂನೆ–೯ ರಲ್ಲಿ ದಾಖಲಾಗಿರುವ ಎಲ್ಲಾ ಆಸ್ತಿಗಳಿಗೂ ಇ–ಆಸ್ತಿ ನೀಡಲು ಸರ್ಕಾರ ಕೈಗೊಳ್ಳುವ ಕ್ರಮವೇನು ?

# ಅಮೃತ್ ಯೋಜನೆಯಡಿ ಕಳೆದ ೫ ವರ್ಷಗಳ ವಿಷಯದ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) –**

೩೦ (೨೧೨) ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಮೃತ್ ಯೋಜನೆಯಡಿ ಆಯ್ಕೆಯಾದ ಕಲ್ಯಾಣ ಕರ್ನಾಟಕ ನಗರಗಳು ಯಾವುವು ; ಈ ನಗರಗಳಲ್ಲಿ ಕಳೆದ ೫ ವರ್ಷಗಳಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ಯೋಜನೆಯಡಿ ಕಳೆದ ೫ ವರ್ಷಗಳಲ್ಲಿ ಬಿಡುಗಡೆಯಾದ ಹಾಗೂ ಖರ್ಚಾದ ಅನುದಾನ ಎಷ್ಟು ; ಪೂರ್ಣಗೊಂಡ ಕಾಮಗಾರಿಗಳು ಎಷ್ಟು ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಸದರಿ ಯೋಜನೆಯಡಿ ಕಲಬುರಗಿ ಮಹಾನಗರದಲ್ಲಿ ಎಷ್ಟು ಮನೆಗಳಿಗೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸಲಾಗಿದೆ ;

(ಈ) ಕಲಬುರಗಿ ಮಹಾನಗರಕ್ಕೆ ಹೊಂದಿಕೊಂಡಿರುವ ಗ್ರಾಮ ಪಂಚಾಯತಿಗಳಿಗೆ ಮೂಲ ಸೌಕರ್ಯ ಕಲ್ಪಿಸಲಾಗಿದೆಯೇ ; ಇಲ್ಲದಿದ್ದಲ್ಲಿ, ಮುಂಬರುವ ದಿನಗಳಲ್ಲಿ ಸದರಿ ಯೋಜನೆ ವ್ಯಾಪ್ತಿಗೆ ಬಡಾವಣೆಗಳನ್ನು ತರಲಾಗುವುದೇ ? (ಮಾಹಿತಿ ನೀಡುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಕಾಸೂ – 576 ಪ್ರತಿಗಳು – 600 (ಪಿ6)

**List of Questions**
**for Oral Answers**

**Total No. of**
**Questions - 15**

# LIST - 02

# KARNATAKA LEGISLATIVE COUNCIL

## ONE HUNDRED AND FIFTY FOURTH SESSION

## Tuesday, the 10th December, 2024

**GROUP - II**

1. Minister for Large and Medium Scale Industries and Infrastructure Development
2. Minister for Textiles, Sugarcane Development and Sugar and Agricultural Marketing
3. Minister for Small Scale Industries and Public Enterprises
4. Minister for Mines and Geology and Horticulture
5. Minister for Municipalities and Haj
6. Minister for Co-operation
7. Minister for Urban Development and Town Planning

### INCREASING OF HARVESTING AND TRANSPORTATION COST OF SUGARCANE

**Sri Madhu G.Madegowda (Graduates' Constituency) -**

16 (246) Will the Minister for Textiles, Sugarcane Development and Sugar and Agricultural Marketing be pleased to state:-

a) the fair and remunerative price (FRP) to be paid per tonne of sugarcane for the year 2024 - 25 by the Sugar factories which are coming under the limit of Mandya district; (sugar factorieswise information be furnished)

b) the harvesting and transportation cost of sugarcane that has been fixed by the sugar factories during the current year;

c) since the harvesting and transportation cost of sugarcane is being increased by the sugar factories unscientifically without any parameters that has causing burdon for farmers, the measures to be taken by the Government to control the same; (details be furnished)

d) the Government has ordered that the sugar factories should pay 100 per tonne additionally along with FRP fixed by the Central Government in the first installment and the sugar factories which have produced ethanol should pay 50 per tonne along with FRP for farmers who have been supplied sugarcane during 2023-24, the measures of the Government with regard to additional price which has not been paid to the farmers till date;

e) the quantum of metric tonne of sugarcane that has been crushed by the sugar factories which are coming under the limit of Mandya district during 2023-24; the percentage of sugar yielded and the quantum of sugar that has been produced, the quantum of sale and the amount that has been accrued from the same; (sugar factorieswise information be furnished)

f) whether any sugar factories of Mandya district have submitted a proposal to the Government with regard to the establishment of ethanol unit? (details be furnished)

**EXPLOSION CASES OF ELECTRIC VEHICLES (EV)**

**Sri Manje Gowda C.N (Local Authorities Constituency) -**

17 (225) Will the Minister for Large and Medium Scale Industries and Infrastructure Development be pleased to state:-

a) whether it has come to the notice of the Government that the cases which has been reported repeatedly that the electric vehicles (EV) which are manufactured in the State are undergone to the fire accident like unexpected explosion and battery explosion;

b) if so, the number of vehicles of various companies which have been undergone to the fire accidents so far;

c) more number of people are buying electric vehicles due to the environmental concerns and savings in fuel costs, whether there is a regulation from the Government on the enterprises of EV vehicles;

d) if so, the details of steps which would be taken by the Government in view of safety of electric vehicles?

## VARIOUS VACANT POSTS IN THE DEPARTMENT OF MUNICIPAL ADMINISTRATION

**Sri K. Abdul Jabbar (Elected by Legislative Assembly) -**

18 (257) Will the Minister for Municipalities and Haj be pleased to state:-

a) whether it has come to the notice of the Government that the various posts are lying vacant in the department of municipal administration of the State; (postwise complete details be furnished)

b) the number of posts that are lying vacant in the said department in the limit of Davangere district; (complete information be furnished)

c) whether it has come to the notice of the Government that the inconvenience is being caused to the administration and public due to the vacant posts; if so, the prevailing impediments for filling up of the vacant posts;

d) the steps taken by the Government to provide the solution to the problems of administration and public by filling up the vacant post?

## IMPLEMENTATION OF SMART CITY PROJECT

**Sri Nagaraju M. (Elected by Legislative Assembly) -**

19 (264) Will the Minister for Urban Development and Town Planning be pleased to state:-

a) whether it has come to the notice of the Government that the smart city project that has been implementing in the five districts of the State has been stagnated;

b) if so, out of the smart city projects that have been taken up, most of the projects are yet in tender stage, the date on which the said works would be completed by taking up the same;

c) whether it has come to the notice of the Government that the health of the common people are affected during the rainy season due to the substandard work like ruining of asphaltisation of the road and flowing of drainages, sewage water on the road where already the smart city projects have been completed;

d) the particulars of actions taken against the contractors and officers who are obtaining the work done certificate by the concerned offices with regard to the completion of the project by carrying out such substandard works in this manner?

## ENROLLMENT OF MEMBERSHIP IN BENGALURU GOLF CLUB

**Sri M.L.Anil Kumar (Local Authorities Constituency) -**

20 (189) Will the Minister for Co-operation be pleased to state:-

a) the prevailing criteria for the enrollment of membership in Bengaluru golf club; (complete information be furnished)

b) the number of renewal and new registered members in the said club from the last 3 years till date; (yearwise complete information be furnished)

c) whether it has come to the notice of the Government that there is non compliance of transparency while providing the membership of this club and obtaining the excise licence illegally and the tax has not been paid to BBMP; if so, the particulars of action taken by

the Government against the club; (complete information be furnished)

d) the particulars of sources from which the revenue is being accrued to the exchequer of the Government from the land which has been given to Bengaluru golf club; the criterias on which this revenue has been prescribed? (complete information be furnished)

## MINING RULES OF DEPARTMENT OF MINES AND GEOLOGY

**Sri Manjunatha Bhandari (Local Authorities Constituency) -**

21 (252) Will the Minister for Mines and Geology and Horticulture be pleased to state:-

a) the particulars of the rules that are being followed by the department of mines and geology in the State with regard to the extraction of granite, marble, blackstone, sand, red stone and other all mining products and soil transportation, marketing and the royalty;

b) whether there is a provision for the extraction, utilization or marketing by transporting any other mineral including the stone and soil etc which are available while executing any road, canal, airport and other public works; whether the cost of stone and soil which are available during the extraction is being deducted in the bill payment;

c) whether restriction has been made for the sale of redstone and soil which are available during the construction of road and highway in Dakshina Kannada district; whether there is a surveillance regarding the utilization of the evicted soil for the same work or selling of the same during the roadwork;

d) the step that is being taken by the department with regard to preventing the landslide during rainy season as per the case of Shirur tragedy by gradually forming 90° steep trench in the high altitude area while transporting soil by digging the hill for the works?

## ENVIRONMENTAL POLLUTION CAUSED BY INDUSTRIAL WASTES

**Dr.Dhananjaya Sarji (Graduates' Constituency) -**

22 (197) Will the Minister for Large and Medium Scale Industries and Infrastructure Development be pleased to state:-

a) the criterias to be followed by the industries for the disposal of various types of waste;

b) whether it has come to the notice of the Government that several industries in the shivamogga district are discharging the hazardous wastes into the lakes/rivers directly without following the criterias of the Government;

c) if so, the particulars of industries on which the action has been taken by the Government; (details be furnished)

d) the stringent actions taken by the Government to ensure that the industries have taken up the necessary arrangements for the disposal of waste and to prevent the discharging of the hazardous waste into lakes/ river bodies directly?

## D.M.F MEETINGS IN BALLARI DISTRICT

**Sri Y.M.Satish (Local Authorities Constituency) -**

23 (178) Will the Minister for Mines and Geology and Horticulture be pleased to state:-

a) the amount that has been collected from the district mineral foundation fund (DMF) in Ballari district during the last 2 years; the particulars of development works

for which this amount has been utilised; (information along with details of phasewise works be furnished)

b) the amount which has been remaining in the district mineral foundation fund at present; (information furnished)

c) the date on which the meeting of district mineral foundation (DMF) has been conducted during the last 2 years; if not, the reasons for the same; the date on which the meeting would be called for and whether the date has been fixed; (information be furnished)

d) the prevailing guidelines/criteria to spend the district mineral foundation fund? (complete details along with copy of the Government order be furnished)

## NOT GETTING OF BUILDINGS LICENCE IN THE LIMIT OF BELTHANGADY TOWN PANCHAYAT

**Sri Prathap Simha Nayak K. (Elected by Legislative Assembly)-**

24 (146) Will the Minister for Municipalities and Haj be pleased to state:-

a) whether it has come to the notice of the Government that the hardship is being caused for public from the long time due to the not getting of building licence for the construction of new house and not getting of licence for renovation or extension of houses which have already existed for khatha holders who have the land conversion sites and identified as per Form-3 earlier than 2017 due to the proposal of implementing Maha yojane of urban authority in the limits of belthangady town panchayat of Dakshina Kannada district;

b) if so, the reason for the Government has not taken any action till date to provide the required building licence for the construction of building by considering as authorized sites and the approval to be accorded for the plan of sites as before without applying the rules of Maha yojane who have the land conversion property for the

non-agriculture purpose earlier than 2017 by considering it as special case regarding to the limit of belthagandy town panchayat;

c) the timelimt within which the benefit would be provided for the public who are awaiting for the solution for the problem from longtime by resolving the said problem of such katha holders?

**ESTABLISHMENT OF SAFAL MODEL MARKET FOR FARMERS**

**Sri P.H.Pujar (Local Authorities Constituency) -**

25 (243) Will the Minister for Mines and Geology and Horticulture be pleased to state:-

a) whether it is true that the "Horticulture university" has been established in Bagalkote due to the reason for export standards of crops that is being grown extensively and with the purpose of providing technical assistance information available to farmers to the near by areas of North Karnataka districts of the State like Bagalkote, Vijayapura and Belagavi;

b) in the same manner, the "safal" named market has been established decades ago in the headquarter of Bengaluru and made availability of good price for farmers crops along with the technology for the farmers of that region who are depending on horticulture, whether it has come to the notice of the Government that the issue of the farmers who are depending on horticulture of North Karnataka region are demanding to establish "safal model" market in Bagalkote;

c) if so, the date on which the safal model market would be established in Bagalkote? (information be furnished)

**PROBLEM OF E-KATHA**

**Sri Rajendra Rajanna (Local Authorities Constituency) -**

26 (238) Will the Minister for Municipalities and Haj be pleased to state:-

a) the number of site/buildings which have not e-katha in the unauthorized layouts in the limits of local bodies of the State like town panchayats, town municipal councils and city municipal councils; (localbodywise and districtwise complete details be furnished)

b) whether it has come to the notice of the Government that the hardship is being faced by the public because of not having e-katha;

c) if so, whether the steps would be taken by the Government for providing the e-katha for the site/ buildings which are not having e-katha in the unauthorized layouts in the limits of town panchayats, town municipal councils and city municipal councils?

## LAND PROVIDED TO JINDAL COMPANY

**Sri C.T.Ravi (Elected by Legislative Assembly) -**

27 (170) Will the Minister for Mines and Geology and Horticulture be pleased to state:-

a) the extent of land that has been provided and intended to be provided newly to Jindal steel company so far; the amount that has been fixed per acre and the current market price for this land;

b) the details of instruction issued by the Hon'ble High court of the State with regard to providing the land to Jindal steel company;

c) the extent of the Government and private land, out of the land intended to be provided to the Jindal company; whether the private land owners have agreed to surrender their land; the extent of acre of land that has been acquired so far; (talukwise details be furnished)

d) whether it has come to the notice of the Government that the land owners and various organizations have opposed the allotment of more land than required land with regard to the allotment of land to the jindal company; the demand of the land owners and organizations; the stand of the Government regarding to their demand;

e) the particulars of facilities that have been provided by the Jindal company to the farmers; the number of direct employment that has been provided by the jindal company under the cadre of A.B.C and Group "D" across the State? (districtwise and postwise details be furnished)

**ILLEGAL SAND MAFIA**

**Sri Thippanappa Kamaknoor (Elected by Legislative Assembly) -**

28 (258) Will the Minister for Mines and Geology and Horticulture be pleased to state:-

a) whether the stringent action would be initiated against the persons who are carrying out illegal sand mafia by controlling the persons who are behaving inhumanly with the persons who are carrying the sand through bullock carts for constructing small home and making minor repairs by seizing sand excluding some persons who are carrying out illegal sand mining using the same number plate for approximately 15 - 20 lorries round the clock of every day even though there are superior cadre officers like SP, Circle Inspector, DYSP and officers of Mining and Transport department in Kalaburagi, Basava Kalyana, Bidar and other places;

b) the number of lorry/vehicles which are involved in such illegal sand mafia and the penalty that has been recovered by seizing the said vehicles ; (details be furnished)

c) the details of the proposals which are before the Government to respond to the problem of common people by simplification to the easy access of sand for the construction of house and minor repair works?

**THE PROBLEM CAUSING FOR PUBLIC DUE TO BASELESS COMPLAINT**

**Sri Chidanand M.Gowda (Graduates' Constituency) -**

29 (155) Will the Minister for Municipalities and Haj be pleased to state:-

a) the number of properties that belongs to the Government or association organsation in the gramathana of somashettihalli village in the limits of chikkabanavara town municipal council of Bengaluru urban district; (the properties which covered under the Karnataka land grabbing prohibition Act, 2011) the number of properties that have been encroached; and the details of encroachers of the same;

b) the number of property owners of the village from 1 to 100 to whom the notice has been issued by the town municipal council on the baseless complaint that has been lodged by the person intentionally in view of offence; out of which, the number of owners by whom the property documents have been submitted; (complete details be furnished)

c) the number of properties that have been registered as dispute in the register on the basis of the complaint of the complainant; whether it is doubtful procedure to registered as dispute for the baseless complaint in this manner;

d) whether it has come to the notice of the Government that the loss is being caused to the town municipal council without accepting the tax of the properties in the limit of gramathana due to the complaint of the same and accepting the tax of revenue sites by providing endorsement; if so, the step taken by the Government in this regard;

e) the property in the limits of gramathana has been registered in Form-9 and mutation register, whether it has come to the notice of the Government that e-Aasthi has not been issued eventhough the sketch of gramathana has been submitted; if so, the steps taken by the Government in this regard;

f) the number of properties in the limits of gramathana and the amount of tax that has been recovered by the same from 2021 to till date;the outstanding tax thereof;

(yearwise details be furnished) whether the demand notice has been issued for the recovery of the outstanding amount; if so, the number of times in which the notice has been issued;

g) the step that would be taken by the Government to issue the e-Aasthi for all the properties which have been registered in Form-9 in the limits of gramathana of somashettihalli village?

## REGARDING AMRUT SCHEME

**Sri Shashil G.Namoshi (Teachers' Constituency) -**

30(212) Will the Minister for Urban Development and Town Planning be pleased to state:-

a) the particulars of cities of Kalyana Karnataka that have been selected under the Amrut scheme; the particulars of works that have been taken up in these cities during the last 5 years; (complete information be furnished)

b) the grant that has been released and spent under this scheme during the last 5 years; the number of works that have been completed; (complete information be furnished)

c) the number of houses for which the water supply and drainage system has been provided in Kalaburagi city corporation under the said scheme;

d) whether the basic facilities have been provided to the grama Panchayats which are adjacent to Kalaburagi city corporation; if not, whether the layouts would be brought under the said scheme in the coming days? (information be furnished)

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru, WD- 2576 - Copies